# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 320 |
| ಮಾನ್ಯ ಸದಸ್ಯರ ಹೆಸರು | ಶ್ರೀ ಸುನೀಲ್ ವಲ್ಯಾಪುರ್<br>(ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | 11-12-2024 |
| ಉತ್ತರಿಸುವ ಸಚಿವರು | ಕಂದಾಯ ಸಚಿವರು |

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಪ್ರಸ್ತುತ ಪ್ರಗತಿಯಲ್ಲಿರುವ ಭೂ ಕಂದಾಯ ವ್ಯವಸ್ಥೆ ಮತ್ತು ಭೂ ದಾಖಲೆಗಳ ಇಲಾಖೆಯಲ್ಲಿ ಪ್ರಸ್ತುತ ಎಷ್ಟು ಯೋಜನೆಗಳನ್ನು ಹಮ್ಮಿಕೊಳ್ಳಲಾಗಿದೆ; | ಭೂಮಾಪನ ಕಂದಾಯ ವ್ಯವಸ್ಥೆ ಮತ್ತು ಭೂದಾಖಲೆಗಳ ಇಲಾಖೆಯಲ್ಲಿ ಪ್ರಸ್ತುತ ಪ್ರಗತಿಯಲ್ಲಿರುವ ಯೋಜನೆಗಳ ವಿವರ ಈ ಕೆಳಕಂಡಂತಿದೆ:-<br>1. ಮೋಜಿಣಿ ತಂತ್ರಾಂಶ ನಿರ್ವಹಣೆ<br>2. ಸ್ವಮಿತ್ವ ಯೋಜನೆ<br>3. ಪೋಡಿ ಮುಕ್ತ ಗ್ರಾಮ ಅಭಿಯಾನ 2.0<br>4. ಮರು ಭೂಮಾಪನ<br>5. ಆಕಾರಬಂದ್ ಗಣಕೀಕರಣ<br>6. ಹಿಸ್ಸಾ ನಕಾಶೆಗಳ ಡಿಜಿಟಲೈಜೆಷನ್<br>7. ಹೊಸ ಕಂದಾಯ ಗ್ರಾಮ ರಚನೆ ಸಂಬಂಧ ಅಳತೆ ಮತ್ತು ದಾಖಲೆ ನಿರ್ಮಾಣ<br>8. ನಗರಾಸ್ತಿ ಮಾಲೀಕತ್ವ ಹಕ್ಕು ದಾಖಲೆ ಯೋಜನೆ (ಯು.ಪಿ.ಓ.ಆರ್)<br>9. ಅರಣ್ಯ-ಕಂದಾಯ ಜಮೀನಿನ ಜಂಟಿ ಅಳತೆ<br>10. ಸ್ಮಶಾನ, ಕೆರೆಗಳ ಅಳತೆ |
| ಆ) | ಈ ಎಲ್ಲಾ ಯೋಜನೆಗೆ ಕಾರ್ಯಕ್ಕೆ ಸಿಬ್ಬಂದಿ ಒದಗಿಸಲಾಗಿದೆಯೇ; | ಹೌದು |
| ಇ) | ಈ ಯೋಜನೆಯ ಗುರಿ ಸಾಧನೆಗೆ ಬೇಕಾದ ಅಗತ್ಯ ತರಬೇತಿ ಮತ್ತು ಉಪಕರಣಗಳನ್ನು ಒದಗಿಸಲಾಗಿದೆಯೇ; (ವಿವರ ನೀಡುವುದು) | ಇಲಾಖೆಯ ಪ್ರಮುಖ ಯೋಜನೆಗಳ ಗುರಿ ಸಾಧನೆಗೆ ಭೂಮಾಪನ ತರಬೇತಿ ಸಂಸ್ಥೆ ಮೈಸೂರು, ಕಲಬುರಗಿ ಮತ್ತು ಕೇಂದ್ರ ಕಚೇರಿಯಿಂದ ಭೂಮಾಪನ ಇಲಾಖೆಯ ಅಧಿಕಾರಿ / ನೌಕರರಿಗೆ ವಿವಿಧ ತಾಂತ್ರಿಕ ವಿಷಯಗಳು ಮತ್ತು ಯೋಜನೆಗಳ ಕಾರ್ಯ ನಿರ್ವಹಣೆ (ಉಪಕರಣಗಳ ಬಳಕೆ, ಕ್ರಿಯಾ ಯೋಜನೆ, ನಿಗಧಿತ ಗುರಿ ಸಾಧನೆ ಇತ್ಯಾದಿ) ಕುರಿತು ತರಬೇತಿ ನೀಡಲಾಗಿದೆ ಹಾಗೂ ಯೋಜನೆಯ ಗುರಿ ಸಾಧನೆಗಾಗಿ ಇಲಾಖೆಯ ವತಿಯಿಂದ ಈ ಕೆಳಕಂಡ ಉಪಕರಣಗಳನ್ನು ಒದಗಿಸಲಾಗಿದೆ:-<br>1) ಶಂಕು ಮತ್ತು ಸರಪಳಿ<br>2) ಸಮತಲ ಮೇಜು<br>3) ಎಲೆಕ್ಟ್ರಾನಿಕ್ ಟೋಟಲ್ ಸ್ಟೇಷನ್<br>4) ಡಿ.ಜಿ.ಪಿ.ಎಸ್<br>5) ರೋವರ್ |

| | | |
|---|---|---|
| ಈ) | ಈ ಯೋಜನೆಗಳನ್ನು ಪೂರ್ಣಗೊಳಿಸುವಲ್ಲಿ ಅಗತ್ಯ ಹೆಚ್ಚುವರಿ ಸಿಬ್ಬಂದಿ ಗಳನ್ನು ನೇಮಿಸಿ ಕೊಳ್ಳಲಾಗಿದ್ದು, ಶನಿವಾರ ಮತ್ತು ಭಾನುವಾರ ಇರುವ ಸಿಬ್ಬಂದಿ ಮೇಲೆ ಮಾನಸಿಕ ಹಾಗೂ ದೈಹಿಕ ಆರೋಗ್ಯದ ಪರಿಗಣನೆಗೆ ತೆಗೆದು ಕೊಳ್ಳದೆ ಒತ್ತಡ ಹೇರಿರುವುದು ಸರಿಯಿದಿಯೇ ಕೆಲಸ ಮಾಡುಸುತ್ತಿರುವುದು ಸರಿಯೇ? | ಭೂಮಾಪನ ಇಲಾಖೆಯ ಯೋಜನೆಗಳನ್ನು ಪೂರ್ಣಗೊಳಿಸಲು ಸಾಮಾನ್ಯವಾಗಿ ಸರ್ಕಾರಿ ರಜಾ ದಿನಗಳಂದು ಕೆಲಸ ನಿರ್ವಹಿಸಲಾಗುತ್ತಿಲ್ಲ. ಯಾವುದೇ ಅನಿವಾರ್ಯ ಹಾಗೂ ತುರ್ತು ಸಂದರ್ಭಗಳಲ್ಲಿ ಸರ್ಕಾರಿ ಅಧಿಕಾರಿಗಳು ಹಾಗೂ ನೌಕರರು ರಜೆಯನ್ನು ಪರಿಗಣಿಸದೇ ಕೆಲಸ ನಿರ್ವಹಿಸುವುದು ಜವಾಬ್ದಾರಿಯುತ ಸರ್ಕಾರಿ ನೌಕರರ ಕರ್ತವ್ಯವಾಗಿರುತ್ತದೆ. |
| ಉ) | ಸರ್ವೆ ಇಲಾಖೆಯಲ್ಲಿನ ಮೂಲ ಆಕಾರಬಂದ್ ಗಳು ಹಾಳಾಗಿದ್ದು ನಶಿಸಿ ಹೋಗುವ ಹಂತದಲ್ಲಿದ್ದು ಇದ್ದರು ಸಹ ಹೊಸದಾಗಿ ಪುನರ್ ನಿರ್ಮಾಣ ಅಥವಾ ಹೊಸದಾಗಿ ಇಲ್ಲಿಯವರೆಗೆ ಲಿಖಿತ ರೂಪದ ಮೂಲ ಆಕಾರ್‌ಬಂದ್ ಬರೆಸುವ ಪ್ರಯತ್ನ ಮಾಡಲಾಗಿದೆಯೇ; ಇಲ್ಲವಾದಲ್ಲಿ ಆಕಾರ್‌ಬಂದ್ ಪ್ರಾಮುಖ್ಯತೆ ಹಾಗೂ ಅದನ್ನು ಮುಂದಿನ ದಿನಗಳಿಗೆ ಹೇಗೆ ಕಾಪಾಡಿಕೊಳ್ಳಲಾಗುವುದೇ: ಗಣಕೀಕರಣ ಮಾಡುತ್ತಿದ್ದರೂ ಕೈಬರಹದ ಪ್ರತಿಯ ಅವಶ್ಯಕತೆ ಇದ್ದು ಮೂಲ ಆಕಾರಬಂದ್ ಬರೆಸುವ ಕೆಲಸವನ್ನು ಸರ್ಕಾರ ಏಕೆ ಕ್ರಮ ಕೈಗೊಂಡಿರುವುದಿಲ್ಲ? (ಮಾಹಿತಿ ನೀಡುವುದು) | ದೈನಂದಿನ ಬಳಕೆಯಿಂದಾಗಿ ಕೆಲವು ಗ್ರಾಮಗಳ ಮೂಲ ಆಕಾರಬಂದ್‌ಗಳು ಶಿಥಿಲ/ನಶಿಸಿ ಹೋಗುವ ಹಂತದಲ್ಲಿದ್ದು, ಸದರಿ ದಾಖಲೆಗಳನ್ನು ಆದ್ಯತೆಯ ಮೇರೆಗೆ ಕಾಲ ಕಾಲಕ್ಕೆ ಹೊಸದಾಗಿ ಪುನರ್ ನಿರ್ಮಾಣ ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ.<br><br>ಈ ಆಕಾರಬಂದ್ ಬಹು ಮುಖ್ಯ ದಾಖಲೆಯಾಗಿರುವುದರಿಂದ ಆಕಾರ್‌ಬಂದಗಳನ್ನು ಸಂರಕ್ಷಿಸುವ ದೃಷ್ಠಿಯಿಂದ ಆಕಾರ್‌ಬಂದ್ ಡಿಜಿಟಲೈಜೆಷನ್ ಕಾರ್ಯವನ್ನು ಪ್ರಾರಂಭಿಸಲಾಗಿದೆ. ಈ ಆಕಾರ್‌ಬಂದ್‌ಗಳನ್ನು ಆನ್‌ಲೈನ್‌ನಲ್ಲಿ ವೀಕ್ಷಿಸಲು ಮತ್ತು ಪಡೆದು ಕೊಳ್ಳಲು ಸಾರ್ವಜನಿಕರಿಗೆ ಅವಕಾಶ ಕಲ್ಪಿಸಲಾಗಿದೆ.<br><br>ರಾಜ್ಯದ ಎಲ್ಲಾ ಆಕಾರ್‌ಬಂದ್‌ಗಳನ್ನು ಡಿಜಿಟಲೈಜೆಷನ್ ಮಾಡುವ ಪೂರ್ವದಲ್ಲಿ ಯಥಾವತ್ತಾಗಿ ಸ್ಕ್ಯಾನ್ ಮಾಡಿ ಸಂರಕ್ಷಿಸಲಾಗಿದೆ. ಗಣಕೀಕರಣ ಮಾಡಲಾಗುತ್ತಿದ್ದರೂ ಸಹ ಕೈಬರಹದ ಪ್ರತಿಯ ಅವಶ್ಯಕತೆ ಇರುವುದನ್ನು ಮನಗಂಡು, ಒಂದು ವೇಳೆ ಮೂಲ ಆಕಾರ್ ಬಂದ್ ಶಿಥಿಲ/ನಶಿಸಿ ಹೋಗಿದ್ದಲ್ಲಿ, ಅಂತಹ ಆಕಾರ್‌ಬಂದ್‌ಗಳನ್ನು ಡಿಜಿಟಲೈಜೆಷನ್ ಮಾಡುವ ಪೂರ್ವದಲ್ಲಿ ಸ್ಕ್ಯಾನ್ ಮಾಡಿದ್ದ ಪ್ರತಿ ಮತ್ತು ಪರ್ಯಾಯ ಪೂರಕ ದಾಖಲೆಗಳನ್ನು ಆಧಾರವಾಗಿಟ್ಟುಕೊಂಡು ಮೂಲ ಆಕಾರ್‌ಬಂದ್ ಅನ್ನು ಪುನರ್ ನಿರ್ಮಾಣ ಮಾಡಿಕೊಂಡು ಭೌತಿಕವಾಗಿ ಸಂರಕ್ಷಿಸಲಾಗುತ್ತಿದೆ. |

<u>**ಸಂಖ್ಯೆ: ಕಂಇ 197 ಎಸ್‌ಎಸ್‌ಸಿ 2024**</u>

**(ಕೃಷ್ಣ ಬೈರೇಗೌಡ)**
ಕಂದಾಯ ಸಚಿವರು